6.	ಚಿತ್ತಾಪೂರ	302.10	.71
7.	ಸೇಡಂ	218.07	.98
8.	ಜೇವರ್ಗಿ	153.15	09
9.	ಗುರಮಿಟಕಾಲ	199.68	94
10.	ಯಾದಗೀರ	206.48	70
11.	ಶಹಾಪೂರ	152.41	27
12.	ಶೋರಾಪೂರ	190.74	81
	ಒಟ್ಟು	2577.09	1.20

ಗುಲ್ಬರ್ಗಾ ಜಿಲ್ಲೆಯ ಸಂಚಾರ ಅನುಕೂಲಕ್ಕಾಗಿ ರಾಷ್ಟ್ರೀಕರಣ ಮಾಡಿರುವ ಖಾಸಗೀ ವ್ಯವಸ್ಥೆ ಅನುಕೂಲ ಮಾಡಿಕೊಡುವುದು

650 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ನಾಗರೀಕರ ಸಂಚಾರದ ಅನುಕೂಲಕ್ಕಾಗಿ ರಾಷ್ಟ್ರೀಕರಣವಾಗಿ ಸಹ ಜನಸಂಚಾರಕ್ಕೆ ಅನಾನುಕೂಲತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಈ ರಾಷ್ಟ್ರೀಕರಣಕ್ಕೆ ಬದಲು ಮೊದಲು ಖಾಸಗೀ ವಾಹನಗಳಲ್ಲಿ ಪ್ರಯಾಣಿಕರಿಗೆ ವೇಳೆಯಲ್ಲಿ ವಾಹನಗಳು ಸಂಚರಿಸಿ ಪ್ರತಿ ಗ್ರಾಮಕ್ಕೆ ಹೋಗುವುದರಿಂದ ಅನುಕೂಲತೆಗಳು ಇದ್ದಿಲ್ಲವೆ,*

ಇ) *ರಾಷ್ಟ್ರೀಕರಣ ಇದ್ದರೂ ಸಹ ಖಾಸಗೀಯವರಿಗೆ ಪರವಾನಿ ನೀಡಿ ಈ ಎರಡು ವ್ಯವಸ್ಥೆಗಳಿಂದ ನಾಗರೀಕರ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಸಾರಿಗೆ ಸೇವೆಯನ್ನು ಅತ್ಯುತ್ತಮವಾಗಿ ನಿರ್ವಹಿಸಲು ಸಾಕಷ್ಟು ಸೇವೆಯನ್ನು ನೀಡುವ ಸಲುವಾಗಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ.

ಇ) ಸರ್ಕಾರವು ಹೊಸ ಸಾರಿಗೆ ನೀತಿಯನ್ನು ರೂಪಿಸುವ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತಿದ್ದು ಕೆಲವು ರಾಷ್ಟ್ರೀಕೃತ ಮಾರ್ಗಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆಯೂ ಇರುತ್ತದೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಈಗ ಪ್ರಕಟಣೆ

1994-95ನೇ ಸಾಲಿನ ಪೂರಕ ಅಂದಾಜುಗಳ ಪ್ರಥಮ ಕಂತನ್ನು ವಿಧಾನಸಭೆಯಲ್ಲಿ ಮಂಡಿಸಲು ಸಂವಿಧಾನದ 205(1)ನೇ ಅನುಚ್ಛೇದದ ಪ್ರಕಾರ ಮಾನ್ಯ ರಾಷ್ಟ್ರಪಾಲರಿಂದ ಶಿಫಾರಸ್ಸು ಬಂದಿರುತ್ತದೆ.